# ಶಾಲಾ ಮಕ್ಕಳಿಂದ ಸ್ವಚ್ಛತಾ ಜಾಥ ಕಾರ್ಯಕ್ರಮದ ವರದಿ.

********

ತುಮಕೂರು:

ನಗರವನ್ನು ಸ್ವಚ್ಛವಾಗಿಡುವಲ್ಲಿ ದೊಡ್ಡವರ ಜೊತೆಗೆ ಮಕ್ಕಳು ಕೈಜೋಡಿಸಬೇಕು. ಈ ಮೂಲಕ ಎಲ್ಲರಲ್ಲಿಯೂ ಮನೆ ಮತ್ತು ಬೀದಿಗಳಲ್ಲಿ ಉತ್ಪತ್ತಿಯಾಗುವ ಕಸದ ನಿರ್ವಹಣೆಯ ಬಗ್ಗೆ ತಿಳುವಳಿಕೆ ಬರುವಂತೆ ಮಾಡಬೇಕೆಂದು ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ನ ಪಿ.ಎಂ.ಸಿ.ವ್ಯವಸ್ಥಾಪಕರಾದ ವಿ.ಪುರುಷೋತ್ತಮ ತಿಳಿಸಿದರು.

ಭಗೀರಥ ಕಾ.ಸಂಯೋಜಕ ಹಡವನಹಳ್ಳಿ ವೀರಣ್ಣಗೌಡ ಮಾತನಾಡುತ್ತ 'ಇಂದು ಮನುಷ್ಯನ ದುರಾಸೆಯಿಂದ ಹಲವಾರು ಸಮಸ್ಯೆಗಳು ಜೀವಸಂಕುಲಕ್ಕೆ ಮಾರಕವಾಗಿ ಪರಿಣಮಿಸುತ್ತಿವೆ. ಅದರಲ್ಲಿ ನಗರಗಳಲ್ಲಿ ಉತ್ಪತ್ತಿಯಾಗುತ್ತಿರುವ ಕಸವೂ ಕೂಡ, ದಿನವು ರಾಶಿರಾಶಿ ಕಸವನ್ನು ಗುಡ್ಡೆ ಹಾಕಲಾಗುತ್ತಿರುವುದು ಜೀವವೈವಿಧ್ಯಗಳ ಅಸ್ತಿತ್ವಕ್ಕೆ ದಕ್ಕೆ ಯಾಗುತ್ತಿದೆ. ಅತಿಯಾದ ಪ್ಲಾಸ್ಟಿಕ್ ಬಳಕೆಯಿಂದ ಪರಿಸರಕ್ಕೆ ಹಾನಿಯಾಗುತ್ತಿದೆ. ಹಾಗಾಗಿ ಮಕ್ಕಳು ಕೂಡ ಮನೆಯಲ್ಲಿ ಮತ್ತು ತಮ್ಮ ಸುತ್ತಮುತ್ತಲಿನ ಜನರಲ್ಲಿ ಈ ಬಗ್ಗೆ ಅರಿವು ಮೂಡಿಸಬೇಕೆಂದು' ಕರೆ ನೀಡಿದರು.

ತುಮಕೂರು ಸ್ಮಾರ್ಟ್ ಸಿಟಿ ಲಿ. ಆಯೋಜಿಸಿ, ಮಹಾನಗರ ಪಾಲಿಕೆ ಸಹಕಾರದೊಂದಿಗೆ, ಭಗೀರಥ ಮೈಸೂರು ಇವರು ಅನುಷ್ಠಾನಗೊಳಿಸುತ್ತಿರುವ ಮಾಹಿತಿ, ಶಿಕ್ಷಣ ಹಾಗೂ ಸಂವಹನ ಕಾರ್ಯಕ್ರಮದ ಭಾಗವಾಗಿ

ಸರ್ಕಾರಿ ಪ್ರಾಥಮಿಕ ಶಾಲೆ, ದಿಬ್ಬೂರಿನಲ್ಲಿ ದಿ. 29/7/2019 ರಂದು ಶಾಲಾಮಕ್ಕಳಿಗೆ ಸ್ವಚ್ಛತಾ ಜಾಥ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸ್ಮಾರ್ಟ್ ಸಿಟಿ ಲಿಮಿಟೆಡ್ ನ ಸಂಪರ್ಕ ಅಧಿಕಾರಿ ಶ್ರೀವರಪ್ರಸಾದ್ ಮಾತನಾಡುತ್ತ "ತುಮಕೂರು ಸ್ವಚ್ಛತೆಗೆ ಪಾಲಿಕೆ ಮತ್ತು ಸ್ಮಾರ್ಟ್ ಸಿಟಿ ಹಾಗೂ ಭಗೀರಥ ಮೈಸೂರು ಹಮ್ಮಿಕೊಂಡಿರುವ ಅರಿವಿನ ಕಾರ್ಯಕ್ರಮಗಳನ್ನು ಜನರು ಸದುಪಯೋಗಪಡಿಸಿಕೊಳ್ಳಬೇಕೆಂದು " ಹೇಳಿದರು.

ಶಿಕ್ಷಕ ಶ್ರೀ ರಂಗಯ್ಯನವರು ಮಾತನಾಡುತ್ತ "ಜನರು ಮನೆಯಲ್ಲಿ ಉತ್ಪತ್ತಿಯಾಗುವ ಕಸವನ್ನು ಪ್ರತ್ಯೇಕಗೊಳಿಸಿ ಕೊಡಬೇಕೆಂದು ಹಾಗೂ ನಮ್ಮನಮ್ಮ ಮನೆಯನ್ನು ಸ್ವಚ್ಛಗೊಳಿಸುವುದರ ಜೊತೆಗೆ ಬೀದಿಗಳನ್ನು ಶುಚಿಯಾಗಿಡಬೇಕೆಂದು" ತಿಳಿಸಿದರು.

ಶಾಲಾ ಮಕ್ಕಳು ಬ್ಯಾನರ್ ಮತ್ತು ಫಲಕಗಳನ್ನಿಡಿದು ಘೋಷಣೆ ಕೂಗುತ್ತ ಊರಿನ ಬೀದಿಗಳಲ್ಲಿ ಜಾಥ ನೆಡೆಸಿದರು.

ಭಗೀರಥ ಕ್ಷೇತ್ರ ಮೇಲ್ವಿಚಾರಕ ಕಾಳಪ್ಪ ಸೊಸೊನೆ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಮುಖ್ಯಶಿಕ್ಷಕರಾದ ಶ್ರೀಮತಿ ಸುಮಂಗಲ, ಸಹಶಿಕ್ಷಕರಾದ ಶ್ರೀನರಸಪ್ಪ  ಮೊದಲಾದವರು ಪಾಲ್ಗೊಂಡು ಸ್ವಚ್ಛತಾ ಜಾಥವನ್ನು ಯಶಸ್ವಿಗೊಳಿಸಿದರು.

**ವಿಷಯ ಸೂಚನೆ:** ಇನ್ನೂ ಹೆಚ್ಚಿನ ತಾಂತ್ರಿಕ ಮಾಹಿತಿಗಾಗಿ ನಮ್ಮ ತಾಂತ್ರಿಕ ತಜ್ಞರಾದ ಶ್ರೀ ವಿನಾಯ್ ರಾಜ್ ಅವರನ್ನು ಸಂಪರ್ಕಿಸಿರಿ. 9964749828